ಬ್ಯಾಂಕಿಂಗ್ ಕ್ಷೇತ್ರದಲ್ಲಿ ಸುದೀರ್ಘ ಕಾಲ ವೃತ್ತಿ ನಿರ್ವಹಿಸಿದ ಎಂ. ನಾಗರಾಜ ಶೆಟ್ಟಿ ವೃತ್ತಿಸಂಬಂಧವಾಗಿ ವಿವಿಧ ಪ್ರದೇಶಗಳಲ್ಲಿ ಕೆಲಸ ಮಾಡಿದ ಅನುಭವಿ. ಯೂನಿಯನ್‌ಗಳಲ್ಲಿಯೂ ಸಕ್ರಿಯರಾಗಿದ್ದವರು. ವೃತ್ತಿ ಅನುಭವದ ಹಿನ್ನೆಲೆ ಅವರನ್ನು ಕಥಾಜಗತ್ತಿಗೆ ಕಾಲಿಡುವಂತೆ ಪ್ರೇರೇಪಿಸಿದೆ. ಓದುವ ಹವ್ಯಾಸ ತಮ್ಮ ಬದುಕಿಗೆ ಅಂತರ್ಜಲ ಎಂದು ನಂಬಿದವರು. ಕಥೆ ಮತ್ತು ವಿಮರ್ಶೆ ಅವರಿಗೆ ಇಷ್ಟದ ಪ್ರಕಾರಗಳು. ವಿವಿಧ ಪತ್ರಿಕೆಗಳಲ್ಲಿ ಆರ್ಥಿಕ ವಿಮರ್ಶೆಯ ಬರಹಗಳನ್ನೂ ಬರೆದಿದ್ದಾರೆ. ದಕ್ಷಿಣ ಕನ್ನಡ ಜಿಲ್ಲೆಯ ಮಂಗಳೂರು ಅವರ ಹುಟ್ಟೂರು.

ಇಟ್ಟುಕೊಂಡು ಸುಖಿಸುತ್ತಿದ್ದರು. ಗಂಡಸರ ಸೊಕ್ಕಿಗೆ ಸಮಾಜದ ಒಪ್ಪಿಗೆ ಇತ್ತು. ಇಷ್ಟವಿರುವಷ್ಟು ದಿನ ಭೋಗಿಸಬಹುದು; ಸಾಕೆಸಿದರೆ ಬಿಟ್ಟು ಬಿಡಲು ಅಡ್ಡಿ ಇಲ್ಲ. ಬಿಟ್ಟ ನಂತರ ಆಕೆಗೆ ದಿಕ್ಕಿಲ್ಲ.

ಲೇಸಿಗಳು ಕಂಡ ಕಂಡವರ ಜೊತೆ ಸೇರುತ್ತಿರಲಿಲ್ಲ. ಮೂರು ತಿಂಗಳು, ಆರು ತಿಂಗಳು, ವರ್ಷ ಹೀಗೆ ಸಾಕುವವರ ಜೊತೆಯಲ್ಲಿ ಹೆಂಡತಿಯಂತೆ ಇದ್ದು ಬಿಡುತ್ತಿದ್ದರು. ನೋಡಿಕೊಳ್ಳುವವರು ಇರದಿದ್ದರೆ ಕೂಲಿನಾಲಿ ಮಾಡಿ ಹೊಟ್ಟೆ ಹೊರೆಯುತ್ತಿದ್ದರು. ಮುಂದಿನ ಹೋಳಿಗೆ ಯಾವನೋ ಪುಣ್ಯಾತ್ಮ ಹೊಂಡದಿಂದ ಎತ್ತುವನೆಂಬ ನಿರೀಕ್ಷೆಯೂ ಇರುತ್ತಿತ್ತು.

'ಏಳೆಂಟು ವರ್ಷ ನೋಡ್ಕಂಡವ್ರು, ಒಂದ್ವರ್ಷ, ಎರಡ್ ವರ್ಷದಲ್ಲಿ ಬಿಟ್ ಬಿಡುವವರೂ ಇದಾರೆ. ಲೇಸಿಗಳೇನೂ ಕಮ್ಮಿ ಇಲ್ಲ ಸರ್, ಜೋರಿರುತ್ತಾರೆ.....' ರಾಜು ಹೇಳುತ್ತಿದ್ದ.

'ಮಕ್ಕಳಾದರೆ ಏನು ಮಾಡುತ್ತಾರೆ?' ಕೃಷ್ಣಪ್ಪ ಮುಗ್ಧವಾಗಿ ಕೇಳಿದರು.

'ಸರ್, ಮಕ್ಕಳಾಗುತ್ತೆ. ಅವರೇನು ತೆಗ್ಸಲ್ಲ. ಹೆಣ್ಣು ಮಗಳಾದ್ರೆ ಲೇಸಿಯಾಗ್ತಾಳೆ ಅಂತ ಹುಟ್ಟಿಸ್ದವನಿಗೂ ಖುಷಿ'

'ಅವನು ತಂದೆ ಅಲ್ಲವೇ?'

'ತಂದೆ ಅಂತ ಹೇಳ್ಕೊಳಲ್ಲ. ಅವಳೇನೂ ಹೇನ್ತಿ ಅಲ್ವಲ್ಲ. ಟೆಂಪೊರರಿ ಅಷ್ಟೇ!'

'ಅವರ ಗತಿ?' ಬೇಸರದಲ್ಲಿ ಕೇಳಿದರು.

'ಕೆಲವ್ರು ಹೊಲ, ಮನೆ ಮಾಡಿಕೊಡ್ತಾರೆ. ಹೇನ್ತಿ ತರ ನೋಡ್ಕಂಡವ್ರೂ ಇದಾರೆ. ಗಂಡು ಮಕ್ಳು ಏನೋ ಮಾಡ್ತಿರ್ತಾವೆ. ಹೆಣ್ಮಕ್ಳನ್ನ ಯಾರು ಮದ್ವೆ ಆಗ್ತಾರೆ? ಅವ್ರೂ ಅದ್ನೇ...' ಕೃಷ್ಣಪ್ಪರಿಗೆ ಚುಚ್ಚಿದಂತಾಯಿತು.

'ಈಗಲೂ ಹೊಂಡಕ್ಕಿಳಿಸೋದು ನಡೀತಿದೆಯಾ?'

'ಇಲ್ಲ ಸಾರ್, ಮಾಡಂಗಿಲ್ಲ. ಹದಿನೈದು ಕಿಲೋಮೀಟರ್ ಆಚೆ ಸನ್ನಿಕಲ್ಲು ಎಂಬ ಊರಿದ್ಯಲ್ಲ ಅಲ್ಲಿ ನಡೀತಿತ್ತಂತೆ. ಚಿಕ್ಕವ್ರಿದ್ದಾಗ ಹೋಳಿ ಆಡೋದು ನೋಡಿದೇವೆ. ಕೆಟ್ ಕೆಟ್ ಮಾತಾಡ್ತಾರೆ, ಎಂಗೆಂಗೋ ಇರ್ತಾರೆ ಅಂತ ನಮ್ಮೆಲ್ಲ ಬಿಡ್ತಿರ್ಲಿಲ್ಲ' ಎಂದ ರಾಜು ದನಿ ತಗ್ಗಿಸಿ, ಇಲ್ಲಿದ್ದ ಮ್ಯಾನೇಜರ್ ಒಬ್ಬರಿಗೆ ಲೇಸಿ ಸಂಬಂಧ ಇತ್ತಂತೆ, ಎರಡು ವರ್ಷ ಒಟ್ಟಿಗೇ ಇದ್ದರು ಎಂದು ಹೇಳುತ್ತಾರೆ ಎಂದು ನಕ್ಕ.

ಕೃಷ್ಣಪ್ಪಗೆ ಈಗ ನಡೀತಿಲ್ವಲ್ಲಾ ಎಂದು ಸಂತೋಷವಾಯಿತು. ಪರಿಸ್ಥಿತಿಯನ್ನು ತಮ್ಮ ಅನುಕೂಲಕ್ಕೆ ಬಳಸಿಕೊಳ್ಳುವವರ ಬಗ್ಗೆ ಬೇಸರವೂ ಆಯಿತು. ಅವರಿಗೆಲ್ಲಾ ಸಾವಿತ್ರಿ ತರ ನಲ್ವತ್ತು, ಐವತ್ತು ಆಗಿರಬೇಕಲ್ಲಾ, ಅವರ ಪರಿಸ್ಥಿತಿ ಹೇಗಿದೆ ಎಂದು ಕುತೂಹಲದಿಂದ ವಿಚಾರಿಸಿದರು. ಕೆಲವರಿಗೆ ಮಾಸಾಶನ ಸಿಗುತ್ತದೆ. ಕೂಲಿನಾಲಿ ಮಾಡುತ್ತಾರೆ. ಮತ್ತೆ ಅದು ಇದೆಯಲ್ಲಾ... ಅದನ್ನೂ ನಡೆಸುತ್ತಾರೆ. ಊರಲ್ಲೊಬ್ಬ ಇದ್ದಾನೆ, ಸಮಾಜಸೇವೆ ಅಂದುಕೊಂಡು ಸಹಾಯಧನ, ಮಾಸಾಶನ ಕೊಡಿಸುತ್ತಾನೆ. ಬಹುಶಃ ಅವನೇ ಸಾವಿತ್ರಿಗೆ ಅಕೌಂಟ್ ಮಾಡಲು ಹೇಳಿರಬಹುದು... ರಾಜು ವಿವರಿಸಿದ.

ಕೃಷ್ಣಪ್ಪ ದೇವದಾಸಿ ಪದ್ಧತಿಯ ಬಗ್ಗೆ ಕೇಳಿದ್ದರು; ಓದಿದ್ದರು. ಗಂಡಸರು ಹೆಣ್ಣು ಮಕ್ಕಳನ್ನು ಉಪಯೋಗಿಸಿಕೊಳ್ಳಲು ಕಂಡುಕೊಂಡ ವಿಧಾನಗಳ ಬಗ್ಗೆ ಅವರಿಗೆ ಹೇವರಿಕೆ ಹುಟ್ಟಿತು. ಸಾವಿತ್ರಿಯಂತವರು ಹೇಗೆ ಬದುಕುತ್ತಾರೆ, ಸರಕಾರದ ಮಾಸಾಶನದಿಂದಷ್ಟೇ ಬದುಕಲು ಸಾಧ್ಯವೇ ಎಂದುಕೊಂಡರು. ಪ್ರತಿ ತಿಂಗಳು ವಿಧವಾ ವೇತನ, ವೃದ್ಧಾಪ್ಯ ವೇತನಕ್ಕೆ ಕಾಯುತ್ತಿರುವವರನ್ನು ಬಲ್ಲರು. ಕೆಲವೊಮ್ಮೆ ಸರಕಾರ ತಿಂಗಳುಗಟ್ಟಲೆ ಕೊಡುವುದೇ ಇಲ್ಲ. ಆಗ ಅವರ

